

# ಭ್ರಮೆ–ವಾಸ್ತವಗಳ ನಡುವೆ

**ಭ್ರಮೆ ಮತ್ತು ವಾಸ್ತವಗಳ ಗಡಿರೇಖೆಯ ಆಚೀಚೆ ಸುಳಿದಾಡುತ್ತಲೇ ಬೆಳೆಯುವ ಈ ಕಿರುಚಿತ್ರ ತಾಂತ್ರಿಕವಾಗಿ ಬಡವಾಗಿದೆ.**

■ ಗೌರಿ

ಸ್ಕಿಝೋಫ್ರೇನಿಯಾ ಒಂದು ವಿಚಿತ್ರವಾದ ಕಾಯಿಲೆ. ಇಲ್ಲದಿರುವುದನ್ನು ಇದೆ ಎಂಬಂತೆ ಭ್ರಮೆ ಹುಟ್ಟಿಸುವುದು, ಕೇಳದಿರುವುದನ್ನು ಕೇಳಿದಂತೆ ಭಾಸಮಾಡುವುದು ಈ ಕಾಯಿಲೆಯ ಮುಖ್ಯ ಲಕ್ಷಣ. ಸದಾ ಇರುವುದರ ಆಚೆಗೇ ದೃಷ್ಟಿನೆಟ್ಟಿರುವ ಸಿನಿಮಾ ಮಾಧ್ಯಮವನ್ನೂ ಈ ಕಾಯಿಲೆ ಸಹಜವಾಗಿಯೇ ಆಕರ್ಷಿಸಿದೆ. ಸ್ಕಿಝೋಫ್ರೇನಿಯಾ ಕಾಯಿಲೆಯನ್ನು ಇಟ್ಟುಕೊಂಡು ಜನಪ್ರಿಯ ಮತ್ತು ಆಫ್ ಬೀಟ್ ಎಂದು ಗುರ್ತಿಸುವ ಕಲಾತ್ಮಕ ಪ್ರಕಾರದಲ್ಲಿಯೂ ಸಾಕಷ್ಟು ಸಿನಿಮಾಗಳು ಬಂದಿವೆ. ಹಿಂದಿಯ ರೋಹನ್ ಶರ್ಮಾ ನಿರ್ದೇಶನದ ‘ದ ಇನ್ ಬಿಟ್ವೀನ್’ ಕಿರುಚಿತ್ರದ ಕೇಂದ್ರದಲ್ಲಿರುವುದೂ ಸ್ಕಿಝೋಫ್ರೇನಿಯಾವೇ.

ಇದು ಒಬ್ಬ ಬರಹಗಾರನ ಕಥೆ. ಸಿನಿಮಾ ತೆರೆದುಕೊಳ್ಳುವುದೇ ಶಿಮ್ಲಾದ ಮನಮೋಹಕ ಕಣಿವೆ, ಜಲಧಾರೆಗಳ ದೃಶ್ಯಗಳೊಂದಿಗೆ. ಅಲ್ಲೆಲ್ಲ ಒಂದು ಗಂಡು ಹೆಣ್ಣು ಪ್ರೇಮಿಸುತ್ತಿದ್ದಾರೆ. ನಂತರ ಈ ದೃಶ್ಯ ಸರಣಿ ಅಲ್ಲಿಗೇ ನಿಂತುಹೋಗುತ್ತದೆ. ಮುಂದಿನ ದೃಶ್ಯದಲ್ಲಿ ಒಬ್ಬ ವ್ಯಕ್ತಿ ಮೇಜಿನ ಮೇಲೆ ಕೂತು ಏನನ್ನೋ ಬರೆಯುತ್ತಿದ್ದಾನೆ. ಅವನ ಹೆಸರು ರಾಘವ್, ಯೋಚಿಸಿ, ಕಲ್ಪಿಸಿ ಬರೆಯುತ್ತಿರುವುದು ಅವನ ಮುಖಭಾವದಲ್ಲಿಯೇ ತಿಳಿಯುತ್ತದೆ. ಅಷ್ಟರಲ್ಲಿ ಅವನಿಗೊಂದು ಕಾಲ್ ಬರುತ್ತದೆ, ಸ್ನೇಹಿತ ಆವೇಶ್‌ನದ್ದು. ಸಂಜೆ ಸಿಗೋಣ ಅನ್ನುತ್ತಾನೆ. ಇವನು ಖುಷಿಯಿಂದಲೇ ಒಪ್ಪಿಕೊಳ್ಳುತ್ತಾನೆ.

ಸಂಜೆ ಆವೇಶ್ ಜೊತೆಗೆ ಇನ್ನೊಬ್ಬ ಸ್ನೇಹಿತ ರವಿ ಕೂಡ ಬಂದಿರುತ್ತಾನೆ. ಮೂವರೂ ಅಲ್ಲಿ ಒಂದಿಷ್ಟು ಕುಡಿದು ನಂತರ ಮನೆಗೆ ಬಂದು ಮತ್ತೆ ಕುಡಿಯಲಾರಂಭಿಸುತ್ತಾರೆ. ಕುಡಿಯುತ್ತ ಕುಡಿಯುತ್ತ ಆವೇಶ್, ತಾನು ನಿನ್ನ ತಂಗಿಯನ್ನು ಪ್ರೀತಿಸುತ್ತಿರುವುದಾಗಿಯೂ, ಅವಳ ಜೊತೆ ದೈಹಿಕ ಸಂಬಂಧ ಹೊಂದಿರುವುದರಿಂದ ಈಗವಳು ಗರ್ಭಿಣಿ ಆಗಿರುವುದಾಗಿಯೂ ಹೇಳುತ್ತಾನೆ. ಅದರಿಂದ ಸಿಟ್ಟಿಗೆದ್ದ ರಾಘವ್, ಆವೇಶನ ಜೊತೆಗೆ ಜಗಳಕ್ಕಿಳಿಯುತ್ತಾನೆ. ಅಷ್ಟರಲ್ಲಿ ಅಲ್ಲಿಗೆ ಬರುವ ರಾಘವ್ ತಂಗಿ ಮತ್ತು ಹೆಂಡತಿ ಶಿಭಾ ಅವನನ್ನು ಸಮಾಧಾನಪಡಿಸುತ್ತಾಳೆ. ರಾಘವ್‌ನನ್ನು ಸಮಾಧಾನ ಮಾಡಿಸಿ ಕೂಡಿಸುವ ಶಿಭಾ, ‘ಇಲ್ಲಿ ನಿನ್ನ ಯಾವ ಸ್ನೇಹಿತರೂ ಇಲ್ಲ. ಅದೆಲ್ಲ ನೀನು ಭ್ರಮಿಸಿಕೊಂಡಿರುವುದು” ಎನ್ನುತ್ತಾಳೆ. ಅಂದರೆ ರಾಘವ್ ಇದುವರೆಗೆ ಸ್ನೇಹಿತರೊಂದಿಗೆ ಕೂತುಕುಡಿದಿದ್ದು, ಮಾತಾಡಿದ್ದು ಎಲ್ಲವೂ ಭ್ರಮೆಯಷ್ಟೆ. ರಾಘವನಿಗೆ ಗೊಂದಲವಾಗುತ್ತದೆ. ಅಷ್ಟರಲ್ಲಿ ಬಾಗಿಲು ಬೆಲ್ ಆಗುತ್ತದೆ. ಹೋಗಿ ನೋಡಿದರೆ, ಈಗಷ್ಟೇ ತನಗೆ ಸಮಾಧಾನ ಮಾಡಿದ್ದ ಹೆಂಡತಿ, ತಂಗಿ ಎಲ್ಲರೂ ಹೊರಗಿದ್ದಾರೆ! ಅಂದರೆ ಈಗ ಅವನಿಗೆ ಶಿಭಾ ಸಮಾಧಾನಮಾಡಿದ್ದೂ ಭ್ರಮೆಯೇ!

ಹೀಗೆ ಯಾವುದು ನಿಜ, ಯಾವುದು ಭ್ರಮೆ ಎಂಬ ಗೊಂದಲದಲ್ಲಿಯೇ ಕಿರುಚಿತ್ರ ಮುಗಿಯುತ್ತದೆ. “ಐಡಿಯಾ’ ಮಟ್ಟದಲ್ಲಿ ಚಿತ್ರ ಚೆನ್ನಾಗಿಯೇ ಇದ್ದರೂ, ಅದನ್ನು ಕಾರ್ಯಗತಗೊಳಿಸುವಲ್ಲಿ ಹಲವು ಸಮಸ್ಯೆಗಳು ಕಾಣಿಸುತ್ತವೆ. ಮುಖ್ಯವಾಗಿ ತಾಂತ್ರಿಕ ಗುಣಮಟ್ಟ. ತೀರಾ ಕಳಪೆಯಾಗಿರುವ ಧ್ವನಿ ವಿನ್ಯಾಸ, ಛಾಯಾಗ್ರಹಣದಿಂದ ಚಿತ್ರದ ಜೀವಂತಿಕೆಯೇ ಕಳೆಗುಂದಿದೆ. ಇಡೀ ಚಿತ್ರದಲ್ಲಿ ಎದ್ದು ಕಾಣುವುದು ಸಂಗೀತ. ಹಿನ್ನೆಲೆ ಸಂಗೀತ ಮತ್ತು ಒಂದು ಹಾಡು ಗಮನ ಸೆಳೆಯುತ್ತದೆ. ಆದರೆ ಅವೆರಡೂ ಈ ಚಿತ್ರದ ಒಟ್ಟಾರೆ ಚೌಕಟ್ಟಿನ ಹೊರಗೇ ನಿಲ್ಲುತ್ತವೆ.

**ಹೆಸರು:** ದ ಇನ್ ಬಿಟ್ವೀನ್
**ನಿರ್ದೇಶನ:** ರೋಹನ್ ಶರ್ಮಾ
**ನಿರ್ಮಾಣ:** ಜೂಹಿ ಶರ್ಮಾ
**ಛಾಯಾಗ್ರಹಣ:** ಅಂಶುದ್ದೀನ್ ಸಿಂಗ್ ರಜಪೂತ್, ನವೀನ್ ಕುಮಾರ್
**ಸಂಗೀತ:** ಶಿಫ್ರಾ
**ತಾರಾಗಣ:** ಅನಿರುದ್ಧ್ ಧನಿಯಾನ್, ಮಧು ಆಗರ್ ವಾಲ್, ಸ್ಮೃತಿ ಕೌಲ್

ಕಿರುಚಿತ್ರ ವೀಕ್ಷಣೆಗೆ https://bit.ly/32E2EGd ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.